ಓ .ಎಸ್ . ನಂ. 223/2021 ಪಿಡಬ್ಲ್ಯೂ1

**ದಿನಾಂಕ 01.07.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ– ಶ್ರೀ ಎನ್.ಆರ್.ಕೆ ಪ್ರತಿವಾದಿ ಪರ ವಕೀಲರಿಂದಃ**

ದಾವಾಸ್ತಿಯನ್ನು ಖರೀದಿ ಮಾಡುವ ಸಂದರ್ಭದಲ್ಲಿ ದಾವಾಸ್ತಿಯ ಆಜುಬಾಜುದಾರರನ್ನು ದಾವಾಸ್ತಿಯ ಕುರಿತು ವಿಚಾರಣೆ ಮಾಡಿರುವುದಿಲ್ಲ. ದಾವಾಸ್ತಿಯಲ್ಲಿ ತೆಂಗು, ಬೀಟೆ ಮತ್ತು ಮಾವಿನ ಮರಗಳು ಇರುತ್ತವೆ ಎಂದರೆ ಸರಿಯಲ್ಲ. ದಾವಾಸ್ತಿಯನ್ನು ಖರೀದಿ ಮಾಡಿದ ನಂತರ ನಗರಸಭೆ ಅಧಿಕಾರಿಗಳ ಮುಖಾಂತರ ಅಳತೆ ಮಾಡಿಸಿರುತ್ತೇನೆ. ದಾವಾಸ್ತಿಯನ್ನು ಅಳತೆ ಮಾಡಿಕೊಡುವಂತೆ ನಗರಸಭೆ ಅಧಿಕಾರಿಗಳಿಗೆ ಅರ್ಜಿ ನೀಡಿರುತ್ತೇನೆ. ಸದರಿ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಗರಸಭೆಯ ಅಧಿಕಾರಿಗಳು ದಾವಾಸ್ತಿಯನ್ನು ಅಳತೆ ಮಾಡಿರುವ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ. ಪುಟ್ಟಮ್ಮ ಹಾಜರು ಪಡಿಸಿದ್ದ ಮೂಲ ಪತ್ರದ ಆಧಾರದ ಮೇಲೆ ನಿಪಿ–2 ರಲ್ಲಿ ಆಸ್ತಿಯ ಅಳತೆಯನ್ನು ನಮೂದಿಸಿರುತ್ತೇನೆ. ಪುಟ್ಟಮ್ಮ ಹಾಜರುಪಡಿಸಿದ ಮೂಲ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಸದರಿ ಮೂಲಪತ್ರವನ್ನು ನಾನು ಪುಟ್ಟಮ್ಮನವರಿಂದ ಪಡೆದುಕೊಂಡಿರುವುದಿಲ್ಲ. ಸದರಿ ಪತ್ರವನ್ನು ನಾನು ಓದಿರುವುದಿಲ್ಲ. ಪುಟ್ಟಮ್ಮನವರಿಗೆ ಯಾವುದೇ ಮೂಲ ಪತ್ರ ಇರುವುದಿಲ್ಲ ಹಾಗೂ ಅವರು ನನ್ನ ಮುಂದೆ ಮೂಲಪತ್ರವನ್ನು ಹಾಜರುಪಡಿಸಿರುದಿಲ್ಲ ಎಂದರೆ ಸರಿಯಲ್ಲ.

ದಾವಾಸ್ತಿಯಅಳತೆ ಪೂರ್ವ ಪಶ್ಚಿಮ –40 ಅಡಿ, ಉತ್ತರ –ದಕ್ಷಿಣ 55 ಅಡಿ ಎಂದರೆ ಸರಿಯಲ್ಲ. ದಾವಾಸ್ತಿಯ ನಿವೇಶನ ಸಂಖ್ಯೆ 10 ಎಂದರೆ ಸರಿಯಲ್ಲ.

ಓ.ಎಸ್ 171/2020ರ ದಾವೆಯಲ್ಲಿ ನಾನು ಸಲ್ಲಿಸಿರುವ ಪ್ರತಿವಾದ ಪತ್ರದ ಕುರಿತು ನನಗೆ ತಿಳಿದಿರುತ್ತದೆ. ಸದರಿ ದಾವೆಗೆ ದಿಃ30.09.2020ರಂದು ನ್ಯಾಯಾಲಯ ನಮ್ಮ ವಿರುದ್ಧ ತಾತ್ಕಲಿಕ ನಿರ್ಬಂಧಕಾಜ್ಞೆ ಆದೇಶ ನೀಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆದೇಶದ ನಂತರ ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ . ಪ್ರತಿವಾದಿಯ ದಿಃ24.11.1980ರ ಕ್ರಯಪತ್ರವನ್ನು ಪ್ರಶ್ನಿಸಿ ಈ ದಾವೆಯಲ್ಲಿ ಯಾವುದೇ ಪರಿಹಾರ ಕೋರಿರುವುದಿಲ್ಲ. ಸದರಿ ಕ್ರಯಪತ್ರವನ್ನು ಅನುಸರಿಸಿ ಪ್ರತಿವಾದಿಯ

ಹೆಸರಿಗೆ ನಮೂದಾಗಿರುವ ಖಾತೆಯನ್ನು ನಾನು ಪ್ರಶ್ನೆ ಮಾಡಿರುವುದಿಲ್ಲ. ದಿಃ24.11.1980 ರ ಕ್ರಯಪತ್ರದ ಬಗ್ಗೆ ನನಗೆ ಮಾಹಿತಿ ಇರುತ್ತದೆ ಎಂದರೆ ಸರಿಯಲ್ಲ. ದಾವಾಸ್ತಿಯನ್ನು ನನಗೆ ಕ್ರಯಕ್ಕೆ ನೀಡಲು ಪುಟ್ಟಮ್ಮರವರಿಗೆ ಯಾವುದೇ ಹಕ್ಕು ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ಪುಟ್ಟಮ್ಮ ನವರು ನನಗೆ ಯಾವುದೇ ಸ್ವಾಧೀನವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ರ ದಾಖಲೆ ನಗರಸಭೆಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಅಕ್ರಮ ಕ್ರಯಪತ್ರದ ಆಧಾರದ ಮೇಲೆ ನಿಪಿ-1ರ ಖಾತೆ ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ನಾನು ದಾವಾಸ್ತಿಯನ್ನು ಖರೀದಿ ಮಾಡುವ ಪೂರ್ವದಲ್ಲಿ ಪುಟ್ಟಮ್ಮ ನವರು ದಾವಾಸ್ತಿಯ ಸ್ವಾಧೀನದಲ್ಲಿದ್ದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

ಪೂರ್ವ ಪಶ್ಚಿಮ -40 ಅಡಿ, ಉತ್ತರ -ದಕ್ಷಿಣ 55 ಅಡಿ ವಿಸ್ತೀರ್ಣದ ದಾವಾಸ್ತಿಯು ಪ್ರತಿವಾದಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ಪ್ರತಿವಾದಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಓ.ಎಸ್.171/2020ರ ಪ್ರಕರಣದಲ್ಲಿ ನಾನು ಪ್ರತಿಪರಿಹಾರ ಕೇಳಿರುವುದಿಲ್ಲ ಎಂದರೆ ಸರಿ . ಸದರಿ ಆಸ್ತಿಯನ್ನು ದಿಃ24.011.1980 ರಂದು ಲಕ್ಕೇಗೌಡರ ಹೆಂಡತಿ ಚಿಕ್ಕಮ್ಮ, ಅವರ ಮಗ ಮಾದಯ್ಯ ಮತ್ತು ಅವರ ಮೈನರ್ ಮಕ್ಕಳು ಪರಶಿವ, ಶಂಕರ ಮತ್ತು ಮೇಜರ್ ಮಗ ಮಹದೇವ ಪ್ರತಿವಾದಿಗೆ ಕ್ರಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕ್ರಯದ ದಿನದಿಂದಲೂ ಇಲ್ಲಿಯವರೆಗೂ ಸದರಿ ಆಸ್ತಿಯಲ್ಲಿ ಪ್ರತಿವಾದಿ ಸ್ವಾಧೀನದಲ್ಲಿ ಇರುತ್ತಾರೆಂದರೆ ಸರಿಯಲ್ಲ.

ನಾನು, ಪುಟ್ಟಮ್ಮ ಮತ್ತು ಅವರ ಮಗ ಮಹದೇವ, ಪರಶಿವ, ಶಂಕರ ಮತ್ತು ಶಿವಮ್ಮ ರವರುಗಳು ಸೇರಿಕೊಂಡು ಪುಟ್ಟಮ್ಮನವರ ಹೆಸರಿಗೆ ಅಕ್ರಮ ಖಾತೆ ದಾಖಲೆಯನ್ನು ಸೃಷ್ಟಿಸಿ ನನ್ನ ಹೆಸರಿಗೆ ನಿಪಿ-2ನ್ನು ಪಡೆದುಕೊಂಡಿರುತ್ತೇನೆಂದರೆ ಸರಿಯಲ್ಲ. ನಾನು ದಿಃ24.11.1980ರ ಕ್ರಯಪತ್ರದ ಚೆಕ್ಕುಬಂಧಿಯನ್ನು ಈ ದಾವೆಯಲ್ಲಿ ನಮೂದಿಸಿರುತ್ತೇನೆಂದರೆ ಸರಿಯಲ್ಲ. ನಿಪಿ-2 ರ ಅಕ್ರಮ ಕ್ರಯ ಪತ್ರದ ಆಧಾರದ ಮೇಲೆ ನನ್ನ ಪರ ಯಾವುದೇ ಹಕ್ಕು ಅಧಿಕಾರ ಉಂಟಾಗದೆ ಇದ್ದರು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ನಾನು ಪ್ರತಿವಾದಿಯಿಂದ ದಾವಾಸ್ತಿಯ ಸ್ವಾಧೀನವನ್ನು ಕಸಿದುಕೊಳ್ಳಲು ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
**ಪ್ರ.ದ.ನ್ಯಾದಂ., ಕೊಳ್ಳೇಗಾಲ**